WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಸೆಪ್ಟೆಂಬರ್ 2008

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-9 ಪುಟಗಳು-6 Registered Under No.KA/SK/UDP/1260/2006-2008 Dated from 01-01-2006 to 31-12-2008.

## ''ಸ್ಥಾನಿಕ ಬ್ರಾಹ್ಮಣ ಸಮಾಜ ನಮಗೆ ಅತ್ಯಂತ ಪ್ರೀತಿ ಪಾತ್ರವಾಗಿರುವ ಸಮಾಜ''

### - ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು



''ಸ್ಥಾನಿಕ ಬ್ರಾಹ್ಮಣ ಸಮಾಜ ನಮಗೆ ಅತ್ಯಂತ ಪ್ರೀತಿಪಾತ್ರವಾಗಿರುವ ಸಮಾಜವಾಗಿದೆ. ಮಾತೆ **ಶ್ರೀ ಶಾರದೆಯ** ಅನುಗ್ರಹದಿಂದ ಅವರು ಶ್ರೇಯೋವಂತರಾಗಿ ಬಾಳಲಿ'' ಎಂದು ಶ್ರೀ ಶೃಂಗೇರಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಚಾತುರ್ಮಾಸ್ಯ ಕಾಲದಲ್ಲಿ ತಮ್ಮ ದರ್ಶನಾಕಾಂಕ್ಷಿಗಳಾಗಿ ಆಗಮಿಸಿದ ಸ್ಥಾನಿಕ ಬ್ರಾಹ್ಮಣ ಸಮಾಜದ ಅಪಾರ ಶಿಷ್ಯವರ್ಗವನ್ನು ಪ್ರೀತಿಪೂರ್ವಕವಾಗಿ ಆಶೀರ್ವದಿಸಿ ಫಲಮಂತ್ರಾಕ್ಷತೆ ನೀಡಿದರು.

ಶ್ರೀ ಜಗದ್ಗುರುಗಳು ಈ ಹಿಂದೆ ನೀಡಿದ ಆದೇಶದಂತೆ ಗಣೇಶ ಚತುರ್ಥಿಯ ಹಿಂದಿನ ಭಾನುವಾರ ಎಂದರೆ ಈ ಸಲ ತಾ.31-08-2008ರಂದು ಚಾತುರ್ಮಾಸ್ಯ ಭೇಟಿ ಕಾರ್ಯಕ್ರಮದಲ್ಲಿ ಉಡುಪಿ, ಮಂಗಳೂರು, ಕುಂದಾಪುರ, ಕಾರ್ಕಳ, ಬೆಂಗಳೂರು, ಪುತ್ತೂರು, ಬೆಳ್ತಂಗಡಿ, ಸುಳ್ಯ, ಮೈಸೂರು, ಪಾವಂಜೆ - ಹೀಗೆ ರಾಜ್ಯಾದ್ಯಂತದಿಂದ ಬಂದ ಸ್ಥಾನಿಕ ಸಮಾಜ ಬಾಂಧವರು ಒಟ್ಟಾಗಿ ಒಮ್ಮನಸ್ಸಿನಿಂದ ಹೊರೆಕಾಣಿಕೆ ನೀಡಿ ಪಾದಪೂಜೆ ಸಲ್ಲಿಸಿ ಜಗದ್ಗುರುಗಳ ಆಶೀರ್ವಚನವನ್ನು ಆಲಿಸಿ ಆಶೀರ್ವಾದವನ್ನು ಪಡೆದರು. ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠ ಸಮಗ್ರ ಭಾರತದಲ್ಲಿರುವ ಶಿಷ್ಯ ವರ್ಗಕ್ಕೆ ಸೂಕ್ತ ಧರ್ಮನಿರ್ದೇಶನ ನೀಡುತ್ತಿದೆ. ಸ್ಥಾನಿಕ ಬ್ರಾಹ್ಮಣ ಸಮಾಜದವರು 25 ವರ್ಷಗಳಿಂದ

(6ನೇ ಪುಟಕ್ಕೆ ...)



## ಶ್ರೀ ಶ್ರೀ ಗುರುಚರಣಕಮಲಕ್ಕೆ ನಮನ

(ಭಾಮಿನಿ ಷಟ್ಪದಿ)



ಆದಿಪೂಜೆಯಗೊಂಬ ಗಣಪಗೆ ।
ಸಾದರದಿ ತಲೆವಾಗುತಲಿ ಶ್ರೀ ।
ಆದಿ ಶಂಕರರಿಂದ ಸ್ಥಾಪಿತ ಕ್ಷೇತ್ರದಲಿ ನೆಲೆಸಿ ॥
ಆದಿಯಿಂದಲು ಭಕ್ತರನು ತಾ ।
ಮೋದದಿಂ ಸಲಹುತಿಹ ಶ್ರೀ ವಿ - ।
ದ್ಯಾಧಿದೇವತೆ ಶಾರದೆಗೆ ಭಯಭಕ್ತಿಯಲಿ ನಮಿಪೆ ॥
ಕಪ್ಪೆಯೊಂದಾದಿತ್ಯನುರುಬೆಗೆ ।
ಸಪ್ಪೆಯಾಗುತೆ ನದಿಯ ತೀರದಿ ।
ಕುಪ್ಪಳಿಸಲಾರದಲೆ ತಾನೇದುಸಿರು ಬಿಡುತಿರಲು ॥
ಒಪ್ಪದಿಂ ತಾನಲ್ಲಿಗೈದಿಹ ।
ಸರ್ಪವೊಂದು ಹೆಡೆಯನು ಬಿಡಿಸುತ ।
ಚಪ್ಪರವ ವಿರಚಿಸುತ ವೈರಿಯ ಪ್ರಾಣ ರಕ್ಷಿಸಿತು ॥
ಪರಮ ಪಾವನೆ ತುಂಗೆ ಹರಿದಿಹ ।
ನಿರುಪಮ ಕ್ಷೇತ್ರವಿದು ನೋಡಲು ।
ವರಮುನಿಪ ಶ್ರೀ ಋಷ್ಯಶೃಂಗರ ಘನತಪೋಭೂಮಿ ॥
ಪರಮಗುರು ಶ್ರೀ ಭಾರತೀ ತೀ - 1
ರ್ಥರ ಚರಣಕಮಲಕ್ಕೆ ವಂದಿಸಿ ।
ವರವ ಬೇಡುವೆವೆಂದು ಸ್ಥಾನಿಕ ಬಂಧುಗಳು ನಾವು ॥

**ಬೆಂಗಳೂರು** **-ಮನಾಹೆಬ್ಬಾರ**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

ತಾ.15-09-2008







॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ಸರ್ವಧಾರಿ ನಾಮ ಸಂವತ್ಸರದ ಕನ್ಯಾ ಮಾಸ ದಿನ ೨೩ ಸಲುವ ಅಶ್ವಯುಜ ಶುದ ೧೦ ಯು, ತಾ.09-10-2008ನೇ ಗುರುವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| | | |
|---|---|---|
| **ಅಂಬಲಪಾಡಿ ಕೃಷ್ಣರಾವ್** | **ಸಿ. ಎಸ್. ರಾವ್** | **ವೈ. ಭುವನೇಂದ್ರ ರಾವ್** |
| ಗೌರವಾಧ್ಯಕ್ಷರು | ಅಧ್ಯಕ್ಷರು | ಕಾರ್ಯದರ್ಶಿ |

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

**ವಿ.ಸೂ. :** 1. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.
2. **ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

**ವಿಜಯದಶಮಿ ಸ್ಪರ್ಧಾ ವಿವರಗಳು 3ನೇ ಪುಟದಲ್ಲಿ.....**